ನೂರಾರು ಅಡಿಗಳಷ್ಟು ಆಳದಲ್ಲಿ ನೀರು ನಿಂತಿತ್ತು. ಅದು ಬಿಸಿಲಿಗೆ ಪಾಚಿಗಟ್ಟಿದಂತೆ ಕಾಣುತ್ತಿತ್ತು. ಗಿಡಮರಗಳಿಂದಲೂ, ಸದಾ ಹಚ್ಚ ಹಸಿರಿನಿಂದಲೂ, ಜೀಕುತ್ತಿದ್ದ ಆ ಕೆರೆಯ ಆಚೆಯ ದೊಡ್ಡ ಗುಡ್ಡಗಳ ಸಾಲು ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದಾಗಿ ಬೋಳು ಬೋಳಾಗಿ ಜೀವ ಕಳಕೊಂಡಿದ್ದವು. ಅಲ್ಲಿಂದ ಕಣ್ಕಿತ್ತು ಕೆರೆಯ ಬದಿಯಲ್ಲಿ ಹಳ್ಳಿಯೊಂದಕ್ಕೆ ಹರಿದಿದ್ದ ಕಾಲು ದಾರಿಯತ್ತ ನೆಟ್ಟ. ಅಲ್ಲಿ ಕಣ್ಣಳತೆಯ ದೂರದಲ್ಲಿ ಅಂದಿನ ಜಾಲಗಿರಿ ಗಿಡ ಹಾಗೆಯೇ ಇತ್ತು. ಶಿವರಾತ್ರಿಯ ಕಾಲವಾದ್ದರಿಂದ ಮೈ ತುಂಬಾ ಹೂವರಳಿಸಿಕೊಂಡಿತ್ತು. ಪೂಂಗೊಡಿಗೆ ಜಾಲಗಿರಿ ಹೂಗಳೆಂದರೆ ಬಲು ಇಷ್ಟ. ಪ್ರತಿ ಶಿವರಾತ್ರಿಯ ಕಾಲದಲ್ಲಿ ಮನೆಯಲ್ಲಿ ಜಾಲಗಿರಿ ಹೂಗಳದೇ ಘಮಲು. ಕೆಲವೊಮ್ಮೆ ಅವುಗಳನ್ನು ಮುಡಿದು ಸಂಭ್ರಮಿಸುತ್ತಿದ್ದಳು. ಮನವಾಳನ್‌ಗೆ ನೆನಪುಗಳು ಒತ್ತರಿಸಿ ಕಂಗಳು ನೀರು ಕಟ್ಟಿಕೊಂಡವು. ಅಲ್ಲಿಂದ ಬಂದವನೇ ಕಡೆಗಾಲದಲ್ಲಿ ತಾನು ಕೆಲಸ ಮಾಡುತ್ತಿದ್ದ ಕೋಣೆಯನ್ನೊಮ್ಮೆ ಇಣುಕಿದ. ಅಲ್ಲಿ ಕತ್ತಲೆ ಮತ್ತು ದೂಳು ಜಿದ್ದಿಗೆ ಬಿದ್ದಿದ್ದವು.

## 6

ಮನವಾಳನ್‌ಗೆ ಬಂದ ದಾರಿಯಲ್ಲಿ ತಿರುಗಿ ಹೋಗಲು ಮನಸಾಗಲಿಲ್ಲ. ಕಾರು ಅವನಿಗೆ ಅತ್ಯಂತ ಪ್ರಿಯವಾಗಿದ್ದ ಸುತ್ತು ಕಣಿವೆಯ ದಾರಿ ಹಿಡಿಯಿತು. ಹಿಂದಿನ ಸೀಟಿನಲ್ಲಿ ಕೂರುತ್ತಿದ್ದ ಮನವಾಳನ್ ಡ್ರೈವರ್ ಪಕ್ಕದ ಸೀಟಿನಲ್ಲಿ ಕೂತಿದ್ದ. ಬೆಂಗಾಡಿನ ಬಯಲುಸೀಮೆಯೊಳಗಿನ ಅಪ್ಪಟ ಮಲೆನಾಡಿನ ಆ ಸುತ್ತು ಕಣಿವೆಯ ದಾರಿಯಲ್ಲಿ ಪೂಂಗೊಡಿಯನ್ನು ತನ್ನ ಯೆಝ್ಡಿ ಬೈಕಿನಲ್ಲಿ ಕೂರಿಸಿಕೊಂಡು ಅಡ್ಡಾಡುವಾಗ ಕಾತ್ರಿಕೆಹಾಳ್, ಜಾಣೆಹಾರು, ಮದನಮಡು, ಅಜ್ಜಿಗುಡ್ಡೆ ಮುಂತಾದ ಊರಿನ ಹೆಸರುಗಳನ್ನು ಕೇಳಿಯೇ ಪುಳಕಗೊಳ್ಳುತ್ತಿದ್ದ ಪೂಂಗೊಡಿ... ಮನವಾಳನ್ ಮನಸು ದಿಮ್ಮಗಾಗತೊಡಗಿತು. ನೆನಪುಗಳು ಕಣ್ಣಿಗೆ ಇಳುಕೊಳ್ಳತೊಡಗಿದವು. ಹೊತ್ತೂ ಇಳಿಯುತ್ತಿತ್ತು. ಇಳಿಹೊತ್ತಿನ ತಂಗಾಳಿ, ಹಸಿರು ಉಭಯಕುಶಲೋಪರಿಯಲ್ಲಿದ್ದವು.

ಕಾರು ಸುತ್ತು ಕಣಿವೆಯ ತುತ್ತ ತುದಿಯನ್ನು ಹತ್ತಿ ಇಳಿದಾರಿಯಲ್ಲಿ ಕೆಳಕ್ಕಿಳಿಯತೊಡಗಿತು. ಮನೆಯತ್ತ ಮುಖ ಮಾಡಿದ್ದ ಸೂರ್ಯ ಎದುರಿನಿಂದ ಕಣ್ಣು ಕುಕ್ಕುತ್ತಿದ್ದ. ಆಗ ಇದ್ದಕ್ಕಿದ್ದಂತೆ ಮನವಾಳನ್‌ಗೆ ಬ್ಯಾಗಿನಲ್ಲಿದ್ದ ಹೊಲದ ದಾಖಲೆ ಪತ್ರಗಳು ನೆನಪಾದವು. ಬಿರಬಿರನೆ ಅವುಗಳನ್ನು ಹೊರತೆಗೆದು ಕಣ್ಣುಂಬಿಕೊಳ್ಳುತ್ತಾ ಗಂಭೀರವಾದ. ಮಾಸಲು ಬಣ್ಣಕ್ಕೆ ತಿರುಗಿದ್ದ ಆ ಪತ್ರಗಳು ಒಂಥರಾ ಮುಗ್ಗಿದ ವಾಸನೆಗಿಟ್ಟುಕೊಂಡಿದ್ದವು. ಎದೆ ಸಂಕಟದ ಕೆರೆಯಾಯ್ತು. ಅವುಗಳಿಂದ ಕಣ್ಕಿತ್ತು ಆಚೆ ನೋಡಿದ. ಅದೇ ಸಮಯಕ್ಕೆ ಸರಿಯಾಗಿ ಉದ್ದ ಗರಿಗಳ ನವಿಲೊಂದು ತನ್ನೆಲ್ಲಾ ಗರಿಗಳನ್ನು ಕೂರಗೆ ಮಾಡಿಕೊಂಡು ಆ ರಸ್ತೆಯನ್ನು ಹಾರುತ್ತಾ ಹೋಯ್ತು. ಕ್ಷಣ ಕಾಲ ಮನವಾಳನ್‌ನೊಳಗೆ ಖುಷಿಯ ಬುಗ್ಗೆ ಚಿಮ್ಮಾಡಿತು. ಆದರದು ಬಲು ಹೊತ್ತು ಬಾಳಲಿಲ್ಲ. ಮತ್ತೆ ಕೈಯ್ಯಲ್ಲಿದ್ದ ಪತ್ರಗಳನ್ನು ಕಣ್ಣುಗಳಿಗತ್ತಿರವಾಗಿ ಹಿಡಿದುಕೊಂಡು ದಿಟ್ಟಿಸಿದ. ಮೆಲ್ಲಗೆ ಮೂಗಿನ ಹತ್ತಿರಕ್ಕಿಡಿದು ಅವುಗಳ ಘಮಲು ಹೀರಿದ.

ಕಾರು ಕಡಿದಾದ ದಾರಿಯಲ್ಲಿ ಸಾವಧಾನದಿಂದ ಸಾಗುತ್ತಿತ್ತು. ಮನವಾಳನ್ ದಾಖಲೆಪತ್ರಗಳಿಂದ ದೃಷ್ಟಿ ಕಿತ್ತು ಮತ್ತೆ ಆಚೆ ನೆಟ್ಟ. ತೇಗ, ಬಾಗಿ, ಮತ್ತಿ, ಅಳಲೆ, ಶ್ರೀಗಂಧ, ಜಾಲಗಿರಿ, ಹೊನ್ನೆ, ದಿಂಡಗ ಮುಂತಾದ ಹತ್ತು ಹಲವು ಮರಗಳು 'ಏನಪ್ಪಾ ಮಿತ್ರಾ ಎಷ್ಟು ದಿನಗಳಾದವು ನಿನ್ನನ್ನು ನೋಡಿ' ಎಂಬುದಾಗಿ ಕೇಳುತ್ತಿರುವಂತೆ ಭಾಸವಾಗಿ ಮತ್ತೊಮ್ಮೆ ಒಮ್ಮೆಗೇ ಜೀವ ಜೀಕಿದಂತಾಯ್ತು. ಅವುಗಳಾಚೆಯ ಕಣಿವೆಯ ತಳದಲ್ಲಿ ಎಲ್ಲೋ ನೀರು ಧುಮುಕುತ್ತಿರುವ ಸದ್ದು ಕೇಳುತ್ತಿತ್ತು. ಆ ಸದ್ದನ್ನು ಆಲಿಸುತ್ತಲೇ ಕೈಲಿದ್ದ ಪತ್ರಗಳನ್ನು ಒಂದೊಂದಾಗಿ ಹರಿದರಿದು ಚೂರು ಚೂರು ಮಾಡಿ,